ಅಧ್ಯಕ್ಷರು : ತಾವು ದಯಮಾಡಿ ಮಂತ್ರಿಗಳನ್ನು ಭೇಟಿಯಾಗಿ ಒಂದು ವೇಳೆ ನೀವು ಹೇಳಿದ್ದು ಸರಿಯಾಗಿದ್ದು ಅವರು ಕನ್‌ಫ್ಯೂಸ್ ಮಾಡಿಕೊಂಡಿದ್ದರೆ ನೀವು ಹೇಳಿದ್ದನ್ನೇ ಮಾಡಿಕೊಡುತ್ತಾರೆ.

ಶ್ರೀ ಶಿವಾನಂದ ನಾಯ್ಕ : ಈಗ ನಮ್ಮ ಗಮನಕ್ಕೆ ತಂದಿದ್ದೇನೆ. ಈಗಾಗಲೆ ಎರಡು ಮೂರು ಸಲ ಅವರಿಗೆ ಹೇಳಿದ್ದೇನೆ.

ಅಧ್ಯಕ್ಷರು : ಯಾವ ರಸ್ತೆ ಎಲ್ಲಿ ಬರುತ್ತದೆ, ಯಾವ ಜಂಕ್ಷನ್ ಎಲ್ಲಿ ಬರುತ್ತದೆ ಎಂದು ದಯಮಾಡಿ ಇಲ್ಲಿ ಚರ್ಚೆ ಮಾಡಿಕೊಳ್ಳುವುದು ಬೇಡ. ತಾವು ದಯಮಾಡಿ ಅವರನ್ನು ಭೇಟಿಯಾಗಿ. ನಿಮಗೆ ಅದರ ಮೇಲೆ ತೊಂದರೆ ಇದ್ದರೆ ನನ್ನನ್ನು ಬಂದು ಕಾಣಿರಿ.

ಹುಬ್ಬಳ್ಳಿಯಲ್ಲಿ ಹೆಚ್ಚುವರಿ ಖಜಾನೆಯನ್ನು ಸ್ಥಳಾಂತರಿಸುವುದು.

383 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ). ಉತ್ತರ ಕರ್ನಾಟಕದಲ್ಲಿಯೇ ವಾಣಿಜ್ಯ ಕೇಂದ್ರವಾಗಿರುವ ಹುಬ್ಬಳ್ಳಿ ಹೆಚ್ಚುವರಿ ಜಿಲ್ಲಾ ಖಜಾನೆಯನ್ನು ಜಿಲ್ಲಾ ಪುನರ್ ವಿಂಗಡನೆಯ ಹಿನ್ನೆಲೆಯಲ್ಲಿ ಸ್ಥಳಾಂತರಿಸುವುದು ಅಗತ್ಯವಾಗಿದೆಯೇ, ಇದರ ಉದ್ದೇಶವೇನು? ಇದರಿಂದ ಸರ್ಕಾರಕ್ಕೆ ಆಗುವ ಲಾಭವೇನು?

ಆ) ಬೆಂಗಳೂರು ನಗರದಂತೆ ಇಲ್ಲಿಯೂ ಸಹ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ಹುಬ್ಬಳ್ಳಿಗೂ ಒಂದು ನಗರ ಖಜಾನೆ ಮಾಡಲು ಬರುವುದಿಲ್ಲವೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಪರಿಶೀಲನೆಯಲ್ಲಿದೆ

ಆ) ಪರಿಶೀಲಿಸಲಾಗುವುದು

ಶ್ರೀ ಅಶೋಕ ಕಾಟವೆ : ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ವಾಣಿಜ್ಯ ಕೇಂದ್ರವಾಗಿರುವ ಹುಬ್ಬಳ್ಳಿ, ಹೆಚ್ಚುವರಿ ಜಿಲ್ಲಾ ಖಜಾನೆಯನ್ನು ಜಿಲ್ಲಾ ಪುನರ್ ವಿಂಗಡಣೆಯ ಹಿನ್ನೆಲೆಯಲ್ಲಿ ಸ್ಥಳಾಂತರಿಸಲಾಗುವುದು ಎಂದು ನಮಗೆ ತಿಳಿದುಬಂದಿದೆ. ಸಚಿವರು ಉತ್ತರದಲ್ಲಿ ಇದು ಪರಿಶೀಲನೆಯಲ್ಲಿದೆ ಎಂದು ಬರೆದಿದ್ದಾರೆ. ಇದರ ಬಗ್ಗೆ ತಿಳಿಸಬೇಕು.

ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ಸುಮಾರು 17 ಉಪ ಖಜಾನೆಗಳಿದ್ದು ಹುಬ್ಬಳ್ಳಿಯಲ್ಲೊಂದು ಅಡಿಷನಲ್ ಟ್ರೆಜರಿಯೊಂದನ್ನು ತೆರೆಯಲಾಗಿತ್ತು. ಈಗ ಜಿಲ್ಲಾ ಪುನರ್ವಿಂಗಡನೆಯಲ್ಲಿ ಗದಗ, ಹಾವೇರಿ ಮತ್ತು ಧಾರವಾಡ ಈ ಮೂರು ಜಿಲ್ಲೆಗಳಾಗುತ್ತಿದ್ದು ಅಲ್ಲಿಗೆ ಒಂದು ಖಜಾನೆ ಮತ್ತು ಅಡಿಷನಲ್ ಟ್ರೆಜರಿಯನ್ನು ಕೊಡಬೇಕಾದ ಅಗತ್ಯವಿಲ್ಲ. ಮೊದಲು ಎಂಟು ತಾಲ್ಲೂಕುಗಳಿದ್ದಾಗ ಎಂಟು ಖಜಾನೆಗಳಿದ್ದವು. ಈಗ ಹಾವೇರಿ ಮತ್ತು ಗದಗ್ ಹೊಸ ಜಿಲ್ಲೆಗಳಾಗುತ್ತಿದ್ದು

ಅಲ್ಲಿಗೆ ಖಜಾನೆಗಳು ಸ್ಥಳಾಂತರವಾಗುತ್ತಿರುವುದರಿಂದ ಹುಬ್ಬಳ್ಳಿಯಲ್ಲಿ ಎರಡು ಖಜಾನೆಗಳನ್ನು ತೆರೆಯುವ ಅಗತ್ಯವಿಲ್ಲ, ಈ ಕುರಿತು ಪರಿಶೀಲಿಸುತ್ತೇನೆ.

ಶ್ರೀ ಅಶೋಕ್ ಕಾಟವೆ : ಹುಬ್ಬಳ್ಳಿ ವಾಣಿಜ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ ನಗರವಾಗಿದ್ದು ಪ್ರತಿ ತಿಂಗಳೂ ಆ ಖಜಾನೆಗೆ ನಾವು ಸುಮಾರು ಐವತ್ತು ಕೋಟಿ ರೂಪಾಯಿಗಳಷ್ಟು ಹಣ ಜಮಾ ಮಾಡುತ್ತಿದ್ದೇವೆ. ಎಕ್ಸೈಸ್ ಆಗಲೀ, ಸೇಲ್ಸ್ ಟ್ಯಾಕ್ಸ್ ಆಗಲೀ, ಇತರ ಸ್ಟಾಂಪ್ ಡ್ಯೂಟಿಯಾಗಲಿ ಎಲ್ಲ ಹಣವನ್ನೂ ಖಜಾನೆಗೆ ಜಮಾ ಮಾಡುತ್ತಿರುವುದರಿಂದ ಬೆಂಗಳೂರು ಮಹಾನಗರದಲ್ಲಿರುವಂತೆ ಹುಬ್ಬಳ್ಳಿ ನಗರದಲ್ಲೂ ಒಂದು ಖಜಾನೆ ಏಕೆ ತೆರೆಯಬಾರದು?

ಶ್ರೀ ಸಿದ್ದರಾಮಯ್ಯ : ದಿನಾಂಕ 1.4.1982ರಿಂದ ಅಲ್ಲೊಂದು ಅಡಿಷನಲ್ ಟ್ರೆಜರಿಯೊಂದನ್ನು ತೆರೆದಿದ್ದೆವು. ಏಕೆಂದರೆ, 17 ಉಪ ಖಜಾನೆಗಳಿಗೆ ಒಂದು ಟ್ರೆಜರಿ ಇದ್ದರೆ ಕಷ್ಟವಾಗುತ್ತದೆಂದು ಅಡಿಷನಲ್ ಟ್ರೆಜರಿಯನ್ನು ತೆರೆಯಲಾಗಿತ್ತು. ಈಗ ಜಿಲ್ಲಾ ಪುನರ್ವಿಂಗಡನೆಯಲ್ಲಿ ಎಂಟು ಖಜಾನೆಗಳು ಬೇರೆಡೆಗೆ ಸ್ಥಳಾಂತರಗೊಳ್ಳುತ್ತಿರುವುದರಿಂದ ಅಡಿಷನಲ್ ಟ್ರೆಜರಿಯ ಅಗತ್ಯವಿಲ್ಲ. ಒಂದು ವೇಳೆ ತೊಂದರೆಯಿದ್ದಲ್ಲಿ ಪರಿಶೀಲಿಸುತ್ತೇವೆಂದು ಹೇಳಿದ್ದೇವೆ. ಅಲ್ಲದೆ, ಬೆಂಗಳೂರಿನಲ್ಲಿ ಸ್ಟೇಟ್ ಹುಜೂರ್ ಖಜಾನೆಯಿದ್ದು, ಜಿಲ್ಲಾ ಖಜಾನೆಯೂ ಇದ್ದು, ಬೆಂಗಳೂರು ಮತ್ತು ಹುಬ್ಬಳ್ಳಿಗೂ ಕಂಪೇರ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಅಶೋಕ್ ಕಾಟವೆ : ಬೆಂಗಳೂರು ನಗರದಂತೆ ಇಲ್ಲಿಯೂ ಸಹ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ಹುಬ್ಬಳ್ಳಿಗೂ ಒಂದು ನಗರ ಖಜಾನೆ ಮಾಡಲು ಬರುವುದಿಲ್ಲವೇ ಎಂದು ಪ್ರಶ್ನಿಸಿರುವುದಕ್ಕೆ ಉತ್ತರವಾಗಿ 'ಪರಿಶೀಲಿಸಲಾಗುವುದು' ಎಂದು ಹೇಳಿದ್ದಾರೆ. ಹುಬ್ಬಳ್ಳಿ ಜಿಲ್ಲೆಯಲ್ಲಿಯೇ ಮಹತ್ವದ ವಾಣಿಜ್ಯದ ನಗರವಾಗಿರುವುದರಿಂದ, ಜನರು ಹೆಚ್ಚು ಮೊತ್ತದ ಟ್ಯಾಕ್ಸ್ ಕೊಡುತ್ತಿರುವುದರಿಂದ....

ಶ್ರೀ ಸಿದ್ದರಾಮಯ್ಯ : ಜಿಲ್ಲಾ ಪುನರ್ವಿಂಗಡನೆಯಾಗಿ ಪ್ರತ್ಯೇಕವಾದ ನಂತರವೂ ಅಲ್ಲಿ ಅಡಿಷನಲ್ ಟ್ರೆಜರಿಯನ್ನು ಉಳಿಸಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿರುವುದರಿಂದ I do not think it is necessary. ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಮೈಸೂರು - ಬಂಟ್ವಾಳ ಹೆದ್ದಾರಿಯಲ್ಲಿರುವ ಕಂಡಡ್ಕ ನದಿಗೆ ಸೇತುವೆ

384 - ಶ್ರೀ ಎಸ್. ಅಂಗಾರ (ಸೂಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬಂಟ್ವಾಳ ರಾಜ್ಯ ಹೆದ್ದಾರಿಯ 172. 80. ಕಿ.ಮೀ. ನಲ್ಲಿ ಮೊಗರ್ಪಸೆ ಎಂಬಲ್ಲಿ ಕಂಡಡ್ಕ ಹೊಳೆಗೆ ನಿರ್ಮಿಸಲಾದ ಸೇತುವೆ ಸುಮಾರು 62 ವರ್ಷಗಳ ಹಿಂದೆ ನಿರ್ಮಿಸಲಾದ ಸೇತುವೆಯಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾದ ಸೇತುವೆಯಾಗಿದ್ದರೆ ಮುರಿದು ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?